ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು.

ಸಂಖ್ಯೆ:ಸಿ8[5]ಶಾ.ಶಿ.ಅ:ಹೆ.ಶಿ.ಸ್ಥ/06/2015-16 ದಿನಾಂಕ: 13.07.2015

: ಸು ತ್ತೋ ಲೆ :

**ವಿಷಯ**: ಖಾಸಗಿ ಅನುದಾನಿತ ಪ್ರೌಢಶಾಲೆಗಳಲ್ಲಿನ ಹೆಚ್ಚುವರಿ ಶಿಕ್ಷಕರುಗಳನ್ನು ಗುರುತಿಸಿ, ಕಾರ್ಯಭಾರವಿರುವ ಪ್ರೌಢಶಾಲೆಗಳಿಗೆ ಮರುಹೊಂದಾಣಿಕೆ ಮಾಡುವ ಕುರಿತು.

**ಉಲ್ಲೇಖ**: 1] ಸರ್ಕಾರದ ಸುತ್ತೋಲೆ ಸಂಖ್ಯೆ:ಇಡಿ:137:ಎಸ್‌ಇಪಿ:2000, ದಿ:23.01.2002.
2] ಸರ್ಕಾರದ ಆದೇಶ ಸಂಖ್ಯೆ:ಇಡಿ:69:ಎಸ್‌ಓಹೆಚ್:2011, ದಿ:31.03.2011.
3] ಈ ಕಛೇರಿಯ ಸುತ್ತೋಲೆ ಸಂಖ್ಯೆ:ಸಿ8[1]ವರ್ಗ:ಅನು:26:2011-12, ದಿನಾಂಕ: 16.04.2015 ಮತ್ತು 19.06.2015

*****

ಖಾಸಗಿ ಅನುದಾನಿತ ಪ್ರೌಢಶಾಲೆಗಳಲ್ಲಿನ ಶಿಕ್ಷಕರುಗಳನ್ನು ಉಲ್ಲೇಖ [1]ರ ಸರ್ಕಾರದ ಆದೇಶದಲ್ಲಿ ತಿಳಿಸಿರುವಂತೆ, ಹಾಜರಾತಿ ಇಲ್ಲದ ಕಾರಣ ನಿಗದಿತ ಕಾರ್ಯಭಾರವಿಲ್ಲದ ಶಿಕ್ಷಕರನ್ನು ಹೆಚ್ಚುವರಿ ಎಂದು ಗುರುತಿಸಿ, ಕಾರ್ಯಭಾರವಿರುವ ಶಾಲೆಗಳಿಗೆ ವರ್ಗಾವಣೆ ಮಾಡಲು ಉಲ್ಲೇಖ [1]ರ ಸುತ್ತೋಲೆಯಂತೆ ಕ್ರಮವಹಿಸಲು ಉಲ್ಲೇಖ [2]ರಲ್ಲಿ ಆದೇಶಿಸಲಾಗಿದೆ. ಉಲ್ಲೇಖ [3]ರ ಈ ಕಛೇರಿಯ ಪತ್ರದಲ್ಲಿ ಹೆಚ್ಚುವರಿ ಶಿಕ್ಷಕರನ್ನು ತಮ್ಮ ಆಡಳಿತ ಮಂಡಳಿಯ ವ್ಯಾಪ್ತಿಯ ಶಾಲೆಗಳಿಗೆ ವರ್ಗಾಯಿಸುವಂತೆ ಮತ್ತು ವರ್ಗಾಯಿಸಲಾಗದ ಶಿಕ್ಷಕರ ವಿವರವನ್ನು ಸಂಬಂಧಿಸಿದ ಉಪನಿರ್ದೇಶಕರುಗಳಿಗೆ ಕಳುಹಿಸುವಂತೆ ಸೂಚಿಸಲಾಗಿದೆ. ಈ ಆಧಾರದ ಮೇಲೆ 2015-16ನೇ ಸಾಲಿನ ಹೆಚ್ಚುವರಿ ಶಿಕ್ಷಕರ ಸ್ಥಳಾಂತರ ಪ್ರಕ್ರಿಯೆಗೆ ಸಂಬಂಧಿಸಿದಂತೆ ಈ ಕೆಳಕಂಡ ಮಾರ್ಗಸೂಚಿಯನ್ನು ಹೊರಡಿಸಲಾಗಿದೆ.

## 01. ಪ್ರಥಮ ಹಂತ:

### I. ಆಡಳಿತ ಮಂಡಳಿಯಿಂದ ವಹಿಸಬೇಕಾದ ಕ್ರಮ:-

ಆಡಳಿತ ಮಂಡಳಿಯ ವತಿಯಿಂದ ಹಲವಾರು ಪ್ರೌಢಶಾಲೆಗಳು ನಡೆಯುತ್ತಿದ್ದು, ಅವುಗಳಲ್ಲಿ ನಿಗದಿತ ಕಾರ್ಯಭಾರವಿಲ್ಲದ ಶಾಲೆಗಳಲ್ಲಿನ ಹೆಚ್ಚುವರಿ ಶಿಕ್ಷಕರುಗಳನ್ನು ಅವರದೇ ಆಡಳಿತ ಮಂಡಳಿಯ ವತಿಯಿಂದ ನಡೆಯುತ್ತಿರುವ ಇತರೆ ಕಾರ್ಯಭಾರವಿರುವ ಶಾಲೆಗಳಲ್ಲಿನ ಖಾಲಿ ಹುದ್ದೆಗಳಿಗೆ ವರ್ಗಾವಣೆ ಮೂಲಕ ಮರು ಹೊಂದಾಣಿಕೆ ಮಾಡಿಕೊಳ್ಳಲು ಮತ್ತು ಇಂತಹ ಅಗತ್ಯವಿರುವ ಖಾಲಿ ಹುದ್ದೆಗಳಿಗೆ ಹೆಚ್ಚುವರಿ ಶಿಕ್ಷಕರನ್ನು ಹುದ್ದೆ ಸಹಿತ ಸ್ಥಳಾಂತರಿಸಿಕೊಳ್ಳಲು ಅವಕಾಶ ಕಲ್ಪಿಸಿದೆ. ಈ ರೀತಿ ವರ್ಗಾವಣೆ/ಸ್ಥಳಾಂತರ ಮಾಡುವಾಗ ಆಡಳಿತ ಮಂಡಳಿಯವರು ಸಿಬ್ಬಂದಿ ಮಾದರಿ ಪ್ರಕಾರ ಹುದ್ದೆ ಮಂಜೂರಾತಿಯಾಗಿ ಅನುದಾನಕ್ಕೊಳಪಟ್ಟಿರುವ ಹುದ್ದೆಗಳು ಪ್ರಸ್ತುತ ಸಾಲಿನ ಮಾನ್ಯತೆ ನವೀಕರಣದಲ್ಲಿ ಉಲ್ಲೇಖಿಸಿರುವ ವಿಭಾಗಗಳ ಸಂಖ್ಯೆಗೆ ದಿನಾಂಕ: 30.06.2015ರ ಅಂತ್ಯಕ್ಕೆ ಸರಾಸರಿ ಹಾಜರಾತಿ, ವಿಷಯ ಹೊಂದಾಣಿಕೆಗೆ ಅನುಗುಣವಾಗಿ ಖಾಲಿ ಇರುವ ಹುದ್ದೆಗಳಿಗೆ ವರ್ಗಾವಣೆ/ಸ್ಥಳಾಂತರ ಮಾಡಿಕೊಳ್ಳತಕ್ಕದ್ದು. ಈ ಪ್ರಕ್ರಿಯನ್ನು ಮುಗಿಸಿ, ಆಡಳಿತ ಮಂಡಳಿಯವರು ಅನುಮೋದನೆಗಾಗಿ ಅವರ ಸ್ಪಷ್ಟ ವರದಿಯೊಂದಿಗೆ ಪ್ರಸ್ತಾವನೆಯನ್ನು ಸಲ್ಲಿಸಬೇಕು.

### II. ಕ್ಷೇತ್ರ ಶಿಕ್ಷಣಾಧಿಕಾರಿಗಳ ಹಂತದಲ್ಲಿ ವಹಿಸಬೇಕಾದ ಕ್ರಮ:-

ಈ ರೀತಿ ಆಡಳಿತ ಮಂಡಳಿಯವರು ಸಲ್ಲಿಸಿರುವ ಪ್ರಸ್ತಾವನೆಗಳನ್ನು ಮೇಲೆ ತಿಳಿಸಿರುವಂತೆ ಎಲ್ಲಾ ಮಾಹಿತಿಗಳನ್ನು ಪೂರೈಸಿರುವ ಬಗ್ಗೆ ಸ್ವತಃ ಖಚಿತ ಪಡಿಸಿಕೊಂಡು ಎಲ್ಲಾ ದಾಖಲೆಗಳನ್ನು ದೃಢೀಕರಿಸಿ, ಈ ಕಛೇರಿಗೆ ಉಪನಿರ್ದೇಶಕರ ಮೂಲಕ ಅನುಮೋದನೆಗಾಗಿ ಪ್ರಸ್ತಾವನೆಯನ್ನು ಸಲ್ಲಿಸಬೇಕು. ಒಂದು ವೇಳೆ ಮಾಹಿತಿಗಳನ್ನು ಪರಿಶೀಲಿಸದೇ ಈ ಕಛೇರಿಗೆ ಸಲ್ಲಿಸಿ ತಿರಸ್ಕೃತಗೊಂಡಲ್ಲಿ ಅದರ ಸಂಪೂರ್ಣ ಜವಾಬ್ದಾರಿ ಕ್ಷೇತ್ರ ಶಿಕ್ಷಣಾದಿಕಾರಿಗಳೇ ಆಗಿರುತ್ತಾರೆ. ಆದ್ದರಿಂದ ಆಡಳಿತ ಮಂಡಳಿ ಸಲ್ಲಿಸಿರುವ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲನೆ ಮಾಡಿ ಈ ಕಛೇರಿಗೆ ಸಲ್ಲಿಸಲು ತಿಳಿಸಿದೆ. ಈ ಪ್ರಕಿಯೆನಂತರ ಮೇಲೆ ತಿಳಿಸಿದಂತೆ ದಿನಾಂಕ: 30.06.2015ರ ಅಂತ್ಯಕ್ಕೆ ಶಾಲಾ ಮಕ್ಕಳ ಸರಾಸರಿ ಹಾಜರಾತಿಯನ್ನು ಪರಿಗಣಿಸಿ ಉಳಿದಿರುವ ವಿಷಯವಾರು ಹೆಚ್ಚುವರಿ ಶಿಕ್ಷಕ/ಹುದ್ದೆಗಳನ್ನು ಗುರುತಿಸುವುದು. ಈ ರೀತಿ ಗುರುತಿಸಲ್ಪಟ್ಟ ಹೆಚ್ಚುವರಿ ಶಿಕ್ಷಕ/ಹುದ್ದೆಗಳ ವಿವರಗಳನ್ನು ಕ್ರೋಢೀಕರಿಸಿ, ಶಾಲಾವಾರು ಮತ್ತು ವಿಷಯವಾರು ತಃಖ್ತೆಯನ್ನು ಸಂಬಂಧಪಟ್ಟ ಜಿಲ್ಲಾ ಉಪನಿರ್ದೇಶಕರಿಗೆ ಸಲ್ಲಿಸುವುದು.

## III. ಉಪನಿರ್ದೇಶಕರ ಹಂತದಲ್ಲಿ ವಹಿಸಬೇಕಾದ ಕ್ರಮ:-

ಮೇಲ್ಕಂಡಂತೆ ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಸಲ್ಲಿಸಲ್ಪಟ್ಟ ಹೆಚ್ಚುವರಿ ಶಿಕ್ಷಕ/ಹುದ್ದೆಗಳ ವಿವರಗಳ ಮಾಹಿತಿಯನ್ನಾಧರಿಸಿ ಸಂಬಂಧ ಪಟ್ಟ ಜಿಲ್ಲಾ ಉಪನಿರ್ದೇಶಕರು ಜಿಲ್ಲಾ ಹಂತದಲ್ಲಿ ಹೆಚ್ಚುವರಿ ಶಿಕ್ಷಕರನ್ನು/ಹುದ್ದೆಗಳನ್ನು ಗುರುತಿಸಲು ಕ್ರಮ ಕೈಗೊಳ್ಳುವುದು. ಕ್ಷೇತ್ರ ಶಿಕ್ಷಣಾಧಿಕಾರಿಗಳ ಸಲ್ಲಿಸಿದ ಮಾಹಿತಿಯನ್ನೇ ಪೂರ್ಣವಾಗಿ ಅವಲಂಬಿಸದೆ ಉಪನಿರ್ದೇಶಕರು ತಮ್ಮ ಹಂತದಲ್ಲಿಯೂ ಸಹ ಸಲ್ಲಿಸಲ್ಪಟ್ಟ ಮಾಹಿತಿ ವಸ್ತುನಿಷ್ಠವಾಗಿರುವ ಬಗ್ಗೆ ಸ್ವತಃ ಖಚಿತ ಪಡಿಸಿಕೊಳ್ಳುವುದು. ಅತ್ಯಂತ ಅವಶ್ಯವಿರುತ್ತದೆ. ಈ ಸಂಬಂಧ ಜಿಲ್ಲೆಯಲ್ಲಿ ಇರುವ ಹೆಚ್ಚುವರಿ ಶಿಕ್ಷಕರ ತಾತ್ಕಾಲಿಕ ಪಟ್ಟಿ ಪ್ರಕಟಿಸಿ ಆಕ್ಷೇಪಣೆಗಳನ್ನು ಆಹ್ವಾನಿಸಲು ಕ್ರಮ ಕೈಗೋಳ್ಳುವುದು. ಆಕ್ಷೇಪಣೆಗಳನ್ನು ಪರಿಶೀಲಿಸಿ, ಹೆಚ್ಚುವರಿ ಶಿಕ್ಷಕರ ಅಂತಿಮ ಪಟ್ಟಿ ಪ್ರಕಟಿಸಿ ಉಪನಿರ್ದೇಶಕರ ಹಂತದಲ್ಲಿ ಕೌನ್ಸಿಲಿಂಗ್ ನಡೆಸಿ, ಸ್ಥಳಾಂತರಗೊಂಡ ಶಿಕ್ಷಕರಿಗೆ ಆದೇಶ ನೀಡುವ ಬಗ್ಗೆ ನಿಯಮಾನುಸಾರ ಅಗತ್ಯ ಕ್ರಮ ಕೈಗೊಳ್ಳುವುದು. ಈ ದಿಸೆಯಲ್ಲಿ ಸುತ್ತೋಲೆಯಲ್ಲಿ ನಿಗದಿಪಡಿಸಿರುವ ಕಾರ್ಯ ಸೂಚಿಯ ವೇಳಾ ಪಟ್ಟಿಯಂತೆ ಕ್ರಮ ವಹಿಸುವ ಬಗ್ಗೆ ಗಮನ ಹರಿಸುವುದು

## IV ಉಪನಿರ್ದೇಶಕರ ಹಂತದಲ್ಲಿ ದೃಢೀಕರಿಸಬೇಕಾದ ದಾಖಲೆಗಳು:

- ಹೆಚ್ಚುವರಿ ಶಿಕ್ಷಕರು ಕೆಲಸ ಮಾಡುತ್ತಿರುವ ಮತ್ತು ವರ್ಗಾವಣೆಗೊಂಡ ಶಾಲೆಗಳ ಸಿಬ್ಬಂದಿ ತಃಖ್ತೆಗಳು.
- ಮೇಲಿನ ಎರಡೂ ಶಾಲೆಗಳಲ್ಲಿನ ತರಗತಿವಾರು ದಾಖಲಾತಿ/ಹಾಜರಾತಿ.
- ಮೇಲಿನ ಎರಡೂ ಶಾಲೆಗಳ ಮಾನ್ಯತೆ ನವೀಕರಣ.
- ಆಡಳಿತ ಮಂಡಳಿಯಲ್ಲಿ ಯಾವುದೇ ವ್ಯಾಜ್ಯವಿಲ್ಲದಿರುವ ಬಗ್ಗೆ ದೃಢೀಕರಣ.
- ಯಾವಾಗಿನಿಂದ ಹುದ್ದೆ ಖಾಲಿಯಾಗಿದೆ ಎಂಬ ಬಗ್ಗೆ ದಿನಾಂಕದೊಂದಿಗೆ ಸ್ಪಷ್ಟಪಡಿಸಿರುವ ಮಾಹಿತಿ.
- ಸಿಬ್ಬಂದಿ ಮಾದರಿಗನುಗುಣವಾಗಿ ವಿಷಯ ಹೊಂದಾಣಿಕೆಯಾಗಿರುವ ಕುರಿತು ಮಾಹಿತಿ.

## *02. ದ್ವಿತೀಯ ಹಂತ:*

ಈ ಪ್ರಕ್ರಿಯ ಮುಗಿದ ನಂತರ ಉಪನಿರ್ದೇಶಕರು ತಮ್ಮ ಹಂತದಲ್ಲಿ ಖಾಲಿ ಹುದ್ದೆಗಳನ್ನು ಮತ್ತು ಹೆಚ್ಚುವರಿ ಶಿಕ್ಷಕರನ್ನು ಗುರುತಿಸುವ ಬಗ್ಗೆ ಕ್ರಮವಹಿಸುವುದು. ಖಾಲಿ ಹುದ್ದೆಗಳ ಮಾಹಿತಿಯನ್ನು ಸಂಗ್ರಹಿಸುವ ಸಮಯದಲ್ಲಿ ಯಾವ ಶಾಲೆಯಲ್ಲಿ ಖಾಲಿ ಹುದ್ದೆಗಳು ಇರುತ್ತವೆಯೋ ಅಂತಹ ಶಾಲೆಗಳ ಆಡಳಿತ ಮಂಡಳಿಯ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳನ್ನು ಕರೆಸಿ, ತಮ್ಮ ವ್ಯಾಪ್ತಿಯಲ್ಲಿ ಸಭೆ ನಡೆಸಿ, ಅವರುಗಳಿಗೆ ಹೆಚ್ಚುವರಿ ಶಿಕ್ಷಕರುಗಳ ಸಮಸ್ಯೆಯನ್ನು ತಿಳಿಯಪಡಿಸಿ, ಅವರ ವತಿಯಿಂದ ನಡೆಯುತ್ತಿರುವ ಶಾಲೆಗಳಲ್ಲಿನ ಖಾಲಿ ಹುದ್ದೆಗಳಿಗೆ ವರ್ಗಾವಣೆ ಮಾಡುವ ಬಗ್ಗೆ ಅವರಿಂದ ಒಪ್ಪಿಗೆ ಪಡೆದು ಕೌನ್ಸಿಲಿಂಗ್ ಮೂಲಕ ವರ್ಗಾಯಿಸುವ ಬಗ್ಗೆ ಕ್ರಮವಹಿಸಲು ತಿಳಿಸಿದೆ.

ಒಂದು ವೇಳೆ ಶಾಲಾ ಆಡಳಿತ ಮಂಡಳಿಯವರು ಹೆಚ್ಚುವರಿ ಶಿಕ್ಷಕರುಗಳನ್ನು ತೆಗೆದುಕೊಳ್ಳಲು ಇಚ್ಚಿಸದಿದ್ದಲ್ಲಿ ಅಂತಹ ಶಾಲೆಯಲ್ಲಿನ ಖಾಲಿಹುದ್ದೆಗಳನ್ನು ಸರ್ಕಾರದ ಆದೇಶದ ಸಂಖ್ಯೆ ಇಡಿ.10.ಎಸ್.ಎಲ್.ಬಿ.2001 ದಿನಾಂಕ: 16.01.2001ರಂತೆ ಶಾಶ್ವತ ಅನುದಾನರಹಿತ ಹುದ್ದೆ ಎಂದು ಘೋಷಿಸುವ ಬಗ್ಗೆ ಸ್ಥಳದಲ್ಲಿಯೇ ಲಿಖಿತ ಆದೇಶ ನೀಡಿ, 30 ದಿನಗಳ ಗಡುವು ನೀಡಿ, ಅವರ ವರದಿ ಪಡೆದು ಉಪನಿರ್ದೇಶಕರುಗಳು ಸ್ಪಷ್ಟ ಅಭಿಪ್ರಾಯದೊಂದಿಗೆ ಈ ಕಛೇರಿಗೆ ಮುಂದಿನ ಕ್ರಮಕ್ಕೆ ಸಲ್ಲಿಸುವುದು.

ಈ ಕಚೇರಿಯು ಈ ಕುರಿತು ನೀಡಿದ ಸಹಮತಿ ಆದರಿಸಿ ಹುದ್ದೆ ರದ್ದತಿ ರಿಜಿಸ್ಟರ್‌ನಲ್ಲಿ ಸೂಕ್ತ ನಮೂದನೆ ಮಾಡತಕ್ಕದ್ದು,ಈ ಅಂಶವನ್ನು ಆಡಳಿತ ಮಂಡಳಿಗಳಿಗೆ ಮನವರಿಕೆ ಮಾಡಿ ಜಿಲ್ಲಾ ಉಪನಿರ್ದೇಶಕರು ಕ್ರಮವಹಿಸಿದಲ್ಲಿ ಹೆಚ್ಚುವರಿ ಶಿಕ್ಷಕರ ವರ್ಗಾವಣೆಯ ಬಗ್ಗೆ ನ್ಯಾಯಾಲಯ ಪ್ರಕರಣಗಳು ಉದ್ಭವಿಸುವುದಿಲ್ಲ ಎಂಬ ಅಂಶವನ್ನು ಗಮನಿಸತಕ್ಕದ್ದು. ಸರ್ಕಾರದ ಆದೇಶ ಸಂಖ್ಯೆ:ಇಡಿ:52:ವಿವಿಧ:1999, ದಿನಾಂಕ:02.02.2000ರ ಸಿಬ್ಬಂದಿ ಮಾದರಿ ಪ್ರಕಾರ ವಿಷಯವಾರು ಶಿಕ್ಷಕರುಗಳು ಇರುವುದನ್ನು ಗಮನಿಸಿಕೊಂಡು ಆ ಶಾಲೆಯಲ್ಲಿನ ವಿಷಯವಾರು ಹುದ್ದೆಗಳಲ್ಲಿ **ಜೇಷ್ಠತೆಗೆ ಅನುಗುಣವಾಗಿ ಕಿರಿಯ ಶಿಕ್ಷಕರುಗಳನ್ನು ಹೆಚ್ಚುವರಿಯೆಂದು** ಗುರುತಿಸಲು ಕ್ರಮವಹಿಸುವುದು. ಇದರಲ್ಲಿ ಏನಾದರೂ ಲೋಪಬಂದಲ್ಲಿ ಅದಕ್ಕೆ ಸಂಬಂಧಿಸಿದ ಉಪನಿರ್ದೇಶಕರೇ ಜವಾಬ್ದಾರರು ಎಂದು ತಿಳಿಸಿದೆ. ಐದು ಅಥವಾ ಹೆಚ್ಚಿನ ವಿಭಾಗಗಳಲ್ಲಿ ಹೆಚ್ಚುವರಿ ಎಂದು ಗುರುತಿಸುವಾಗ ಸಿಬ್ಬಂದಿ ಮಾದರಿ ಮತ್ತು ವಿಷಯವಾರು ಬೋಧನಾವಧಿಗಳನ್ನು ಲೆಕ್ಕಾಚಾರ ಮಾಡಿಕೊಂಡು ಅವಶ್ಯಕತೆಗಿಂತ ಹೆಚ್ಚಿರುವ ಶಿಕ್ಷಕರುಗಳನ್ನು ಹೆಚ್ಚುವರಿ ಎಂದು ಗುರುತಿಸತಕ್ಕದ್ದು.

***03. ತೃತೀಯ ಹಂತ:*** ಮೇಲ್ಕಂಡ ಎರಡೂ ಹಂತದ ಪ್ರಕ್ರಿಯೆ ಮುಗಿದ ನಂತರ ತಮ್ಮ ಹಂತದಲ್ಲಿ ಖಾಲಿ ಹುದ್ದೆಗಳು ಲಭ್ಯವಾಗದ ಕಾರಣ ಉಳಿದಿರುವ ಹೆಚ್ಚುವರಿ **ಶಿಕ್ಷಕರನ್ನು ನಿರ್ದೇಶಕರು [illegible], [illegible]**

[signature]

ಹಂತದಲ್ಲಿ ವರ್ಗಾವಣೆ ಮೂಲಕ ಕ್ರಮ ಮಾಡುವ ಸಂಬಂಧ ಹೆಚ್ಚುವರಿ ಶಿಕ್ಷಕರ ಪಟ್ಟಿ ಹಾಗೂ ಖಾಲಿ ಹುದ್ದೆಗಳ ಪಟ್ಟಿಯನ್ನು ವಿಷಯವಾರು ಮಾಹಿತಿಯನ್ನು **ನುಡಿ ಅಕ್ಷರದಲ್ಲಿ ಹಾಗೂ ಎಂ.ಎಸ್. ಎಕ್ಸೆಲ್ ನಲ್ಲಿಯೇ ಗಣಕೀಕರಿಸಿ, ಒಂದು ಹಾರ್ಡ್ ಕಾಪಿ ಮತ್ತು ಒಂದು ಸಾಫ್ಟ್ ಕಾಪಿಯನ್ನು** **giaest2@gmail.com** ವಿಳಾಸಕ್ಕೆ ಈ ಕಛೇರಿಗೆ ಇಮೇಲ್ ಮೂಲಕ ಸಲ್ಲಿಸತಕ್ಕದ್ದು. ಖಾಲಿ ಹುದ್ದೆಗಳ ಮಾಹಿತಿಯನ್ನು ಮೇಲ್ಕಂಡಂತೆ ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಪಡೆದು ಕ್ರೋಢೀಕೃತ ತ:ಖ್ತೆಯನ್ನು ವಿಷಯವಾರು ತಯಾರಿಸಿ ಸಲ್ಲಸುವುದು [ ಬ್ಲಾಕ್‌ವಾರು ಕಳುಹಿಸುವ ಅಗತ್ಯ ಇರುವುದಿಲ್ಲ] **ಈ ಎಲ್ಲಾ ಪ್ರಕ್ರಿಯೆ ಮುಗಿಯುವವರೆಗೂ ಅನುದಾನಿತ ಪ್ರೌಢಶಾಲೆಗಳಲ್ಲಿನ ಖಾಲಿ ಹುದ್ದೆಗಳಿಗೆ ಅನುಮತಿ ನೀಡುವ ಪ್ರಕ್ರಿಯೆಯನ್ನು ತಾತ್ಕಾಲಿಕವಾಗಿ 30ನೇ ಆಗಸ್ಟ್ 2015ರ ವರೆಗೆ ಸ್ಥಗಿತಗೊಳಿಸಲಾಗಿದೆ.** ಒಂದು ವೇಳೆ ನಿಮ್ಮ ಕಛೇರಿಯಲ್ಲಿ ಆಡಳಿತ ಮಂಡಳಿಯವರು ಖಾಲಿ ಹುದ್ದೆಗಳಿಗೆ ಭರ್ತಿ ಮಾಡುವ ಸಂಬಂಧ ಪ್ರಸ್ತಾವನೆಗಳು ಬಾಕಿ ಇದ್ದಲ್ಲಿ ಅಂತಹ ಪ್ರಸ್ತಾವನೆಗಳನ್ನು ಈ ಕಛೇರಿಗೆ ಸಲ್ಲಿಸದೇ ಆ ಹುದ್ದೆಗಳನ್ನು ಹೆಚ್ಚುವರಿ ಶಿಕ್ಷಕರ ಪ್ರಕ್ರಿಯೆಗೆ ಬಳಸಿಕೊಳ್ಳಲು ತಿಳಿಸಿದೆ. ಹಾಗೂ ಈ ಕಛೇರಿಯಲ್ಲಿ ಅಂತಹ ಪ್ರಸ್ತಾವನೆಗಳಿದ್ದಲ್ಲಿ ಅವುಗಳಿಗೆ ಅನುಮತಿ ನೀಡದೆ ಹಿಂತಿರುಗಿಸುವ ಪ್ರಕ್ರಿಯೆಯನ್ನು ಮಾಡಲಾಗಿದೆ. ಆ ಖಾಲಿ ಹುದ್ದೆಗಳನ್ನು ಸಹ ಹೆಚ್ಚುವರಿ ಶಿಕ್ಷಕರ ಪ್ರಕ್ರಿಯೆಗೆ ಬಳಸಿಕೊಳ್ಳಲು ಅನುಮತಿ ನೀಡಿದೆ.

- ಕಳೆದ ಬಾರಿ ಕಾರ್ಯಬಾರವಿದ್ದರೂ ಸಹ ಹೆಚ್ಚುವರಿ ಶಿಕ್ಷಕರನ್ನು ಗುರುತಿಸಿ ಅದೇ ಹುದ್ದೆಗೆ ಬೇರೆ ಶಿಕ್ಷಕರನ್ನು ವರ್ಗಾವಣೆ ಮೂಲಕ ಭರ್ತಿಸಲು ಶಿಫಾರಸ್ಸು ಮಾಡಿರುವ ಪ್ರಕರಣಗಳು ಇಲಾಖಾ ಗಮನಕ್ಕೆ ಬಂದಿರುತ್ತವೆ. ಈ ರೀತಿ ನಿಯಾಮಬಾಹಿರವಾಗಿ ಶಾಲೆಗಳಲ್ಲಿ ಹಾಜರಾತಿ ಇದ್ದರೂ ಸಹ ಹೆಚ್ಚುವರಿ ಶಿಕ್ಷಕರನ್ನು ಗುರುತಿಸಿದ್ದಲ್ಲಿ ಸಂಬಂಧಿಸಿದ ಉಪನಿರ್ದೇಶಕರನ್ನೇ ನೇರ ಹೊಣೆಗಾರರನ್ನಾಗಿ ಮಾಡಲಾಗುವುದು
- ಹೆಚ್ಚುವರಿ ಶಿಕ್ಷಕರನ್ನು ಮರು ಹಂಚಿಕೆ ಮಾಡಿದ ಶಾಲೆಗಳಲ್ಲಿನ ಖಾಲಿ ಹುದ್ದೆಗಳಿಗೆ ಅಡಳಿತ ಮಂಡಳಿ ಕರ್ತವ್ಯಕ್ಕೆ ಹಾಜರುಪಡಿಸಿಕೊಳ್ಳಲು ನಿರಾಕರಿಸಿದ್ದು, ಈ ಹಿನ್ನಲೆಯಲ್ಲಿ ಅ ಶಾಲೆಯಲ್ಲಿನ ಖಾಲಿಹುದ್ದೆಯನ್ನು ಅನುದಾನರಹಿತ ಎಂದು ಘೋಷಣೆ ಮಾಡಿದ ಪ್ರಮಾಣ ಪತ್ರ ನೀಡುತ್ತಿಲ್ಲ. ಒಂದು ವೇಳೆ ಉಪನಿರ್ದೇಶಕರು ಅ ಶಾಲೆಯಲ್ಲಿನ ಖಾಲಿಹುದ್ದೆಯನ್ನು ಅನುದಾನರಹಿತ ಎಂದು ಘೋಷಣೆ ಮಾಡದೆ ಅನುಮತಿ/ಅನುಮೋದನೆಗೆ ಪ್ರಸ್ತಾವನೆಯನ್ನು ಸಲ್ಲಿಸಿದ್ದಲ್ಲಿ ಮುಂದಿನ ಆಗುಹೋಗುಗಳಿಗೆ ಸಂಬಂಧಿಸಿದ ಉಪನಿರ್ದೇಶಕರನ್ನೇ ಸಂಪೂರ್ಣ ಹೊಣೆಗಾರರನ್ನಾಗಿ ಮಾಡಲಾಗುವುದು.
- ಸರ್ಕಾರದ ಸುತ್ತೋಲೆ ಸಂಖ್ಯೆ ಇಡಿ.200.ಪಿ.ಎಂ.ಸಿ.99 ದಿನಾಂಕ: 03.02.2000ರಲ್ಲಿ ಆಡಳಿತ ಮಂಡಳಿಯ ವತಿಯಿಂದ ಒಂದಕ್ಕಿಂತ ಹೆಚ್ಚು ಅನುದಾನಿತ ಪ್ರೌಢಶಾಲೆಗಳನ್ನು ನಡೆಸುತ್ತಿದ್ದಲ್ಲಿ ಆಯಾ ಆಡಳಿತ ಮಂಡಳಿಯವರು ತಮ್ಮ ಅಧೀನ ಶಿಕ್ಷಣ ಸಂಸ್ಥೆಗಳಲ್ಲಿ ಖಾಲಿ ಇರುವ ಹುದ್ದೆಗಳಿಗೆ ವಿಷಯವಾರು ಹೊಂದಾಣಿಕೆಯನ್ನು ಗಮನದಲ್ಲಿರಿಸಿಕೊಂಡು ಮರು ಹೊಂದಾಣಿಕೆ ಮಾಡಿಕೊಳ್ಳುವ ಪ್ರಕ್ರಿಯೆಯನ್ನು ಪೂರ್ಣಗೊಳಿಸಿಕೊಳ್ಳುವಂತೆ ಸೂಚನೆ ನೀಡುವುದು. ಇಂತಹ ಮರು ಹೊಂದಾಣಿಕೆಯು ಮಂಜೂರಾದ ಅನುದಾನಿತ ಹುದ್ದೆಗಳಿಗೆ ಮಾತ್ರ ಸೀಮಿತವಾಗತಕ್ಕದ್ದು.
- ಖಾಸಗಿ ಅನುದಾನಿತ " ಮತೀಯ ಅಲ್ಪ ಸಂಖ್ಯಾತ ಶಾಲೆಗಳಿಗೆ " ಸಂಬಂಧಿಸಿದಂತೆ ಕರ್ನಾಟಕ ಶಿಕ್ಷಣ ಕಾಯ್ದೆ 1983 ಕರ್ನಾಟಕ ಶಿಕ್ಷಣ ಸಂಸ್ಥೆಗಳು [ ಖಾಸಗಿ ಅನುದಾನಿತ ಪ್ರಾಥಮಿಕ ಮತ್ತು ಪ್ರೌಢ ಶಾಲಾ ಶಿಕ್ಷಣ ಸಂಸ್ಥೆಗಳ ಸಿಬ್ಬಂದಿ ವರ್ಗದವರ ಸೇವಾ ಷರತ್ತು ಮತ್ತು ನೇಮಕಾತಿ ನಿಬಂಧನೆಗಳು ] ನಿಯಮಗಳು 1999ರ ನಿಯಮ 11ರಡಿಯಲ್ಲಿನ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದು.
- ಜಿಲ್ಲಾ ಹಂತದಲ್ಲಿ ವಿಷಯವಾರು ಗುರುತಿಸಲಾದ ಹೆಚ್ಚುವರಿ ಶಿಕ್ಷಕರನ್ನು ಜಿಲ್ಲಾ ವ್ಯಾಪ್ತಿಯಲ್ಲಿ ವಿಷಯವಾರು ಖಾಲಿ ಇರುವ ಹುದ್ದೆಗಳಿಗೆ ಮರು ಹಂಚಿಕೆ ಮಾಡಲು ಕ್ರಮ ವಹಿಸುವುದು. ಈ ಪ್ರಕ್ರಿಯೆ ಮುಗಿದ ನಂತರ ಜಿಲ್ಲಾ ಹಂತದಲ್ಲಿ ಖಾಲಿ ಹುದ್ದೆಗಳಿಲ್ಲದೆ ಮರು ಹಂಚಿಕೆಯಾಗದೆ ಇರುವ ವಿಷಯವಾರು ಶಿಕ್ಷಕರ ಪಟ್ಟಿಯನ್ನು ಮಾತ್ರ ರಾಜ್ಯ ಮಟ್ಟದ ಕೌನ್ಸಿಲಿಂಗ್‌ಗೆ ಸಲ್ಲಿಸುವುದು. ಅಯಾ ವಿಷಯಗಳ ಖಾಲಿ ಹುದ್ದೆಗಳು ಜಿಲ್ಲಾ ವ್ಯಾಪ್ತಿಯಲ್ಲಿ ಲಭ್ಯತೆ ಇದ್ದರೂ ಪರಿಶೀಲಿಸದೆ ರಾಜ್ಯ ಮಟ್ಟದ ಕೌನ್ಸಿಲಿಂಗ್‌ಗೆ ಪ್ರಸ್ತಾಪಿಸಿದಲ್ಲಿ ಗಂಭೀರವಾಗಿ ಪರಿಗಣಿಸಲಾಗುವುದು.
- ಹೆಚ್ಚುವರಿ ಶಿಕ್ಷಕರ ಸ್ಥಳಾಂತರದ ಪ್ರಕ್ರಿಯೆಯಲ್ಲಿ ಪ್ರಸ್ತುತ " ವರ್ಕಿಂಗ್ ಅರೇಂಜ್‌ಮೆಂಟ್ " ಮೇಲೆ ಕಾರ್ಯ ನಿರ್ವಹಿಸುತ್ತಿರುವ ಶಿಕ್ಷಕರಿಗೆ ಪ್ರಥಮ ಆದ್ಯತೆ ಮೇಲೆ ಪರಿಗಣಿಸಿ ಮರುಹೊಂದಾಣಿಕೆ ಮಾಡಲು ಕ್ರಮ ವಹಿಸುವುದು.

ಈ ಸಂಬಂಧ ಹೆಚ್ಚುವರಿ ಶಿಕ್ಷಕರ ಪ್ರಕ್ರಿಯೆಯನ್ನು ನಡೆಸುವ ಕುರಿತು ಕಾರ್ಯಸೂಚಿ ವೇಳಾಪಟ್ಟಿ ಈ ಕೆಳಕಂಡಂತಿರುತ್ತದೆ.

**ಕಾರ್ಯಸೂಚಿ ವೇಳಾಪಟ್ಟಿ**

| ಕ್ರ.ಸಂ | ಹೆಚ್ಚುವರಿ ಶಿಕ್ಷಕರ ಸ್ಥಳಾಂತರಿಸುವ ಚಟುವಟಿಕೆ | ದಿನಾಂಕ |
|---|---|---|
| 01. | ಆಡಳಿತ ಮಂಡಳಿಯ ವತಿಯಿಂದ ಹಲವು ಪ್ರೌಢಶಾಲೆಗಳನ್ನು ನಡೆಸುತ್ತಿರುವ ಶಾಲೆಗಳಲ್ಲಿ ಹೆಚ್ಚುವರಿಯಾಗಿರುವ ಶಿಕ್ಷಕರನ್ನು ಖಾಲಿ ಇರುವ ಅನುದಾನಿತ ಪ್ರೌಢಶಾಲೆಗಳಲ್ಲಿನ ಹುದ್ದೆಗಳಿಗೆ ಮರುಹೊಂದಾಣಿಕೆ/ಸ್ಥಳಾಂತರ ಮಾಡಿಕೊಳ್ಳುವುದು. | 20.07.2015 |
| 02. | ಈ ಪ್ರಕ್ರಿಯೆ ನಂತರ ಕ್ಷೇತ್ರ ಶಿಕ್ಷಣಾಧಿಕಾರಿಗಳ ಹಂತದಲ್ಲಿ ಹೆಚ್ಚುವರಿ ಶಿಕ್ಷಕರ / ಖಾಲಿ ಹುದ್ದೆಗಳ ವಿವರಗಳನ್ನು ಗುರುತಿಸುವುದು | 25.07.2015 |
| 03. | ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಪ್ರಸ್ತಾವನೆ ಸಲ್ಲಿಸಲ್ಪಟ್ಟ ತರುವಾಯ ಉಪನಿರ್ದೇಶಕರು ಜಿಲ್ಲಾ ಹಂತದಲ್ಲಿ ಹೆಚ್ಚುವರಿ ಶಿಕ್ಷಕರ / ಖಾಲಿ ಹುದ್ದೆಗಳ ವಿವರಗಳನ್ನು ಗುರುತಿಸುವುದು | 28.07.2015 |
| 04 | ಜಿಲ್ಲೆಯಲ್ಲಿ ಇರುವ ಹೆಚ್ಚುವರಿ ಶಿಕ್ಷಕರ ತಾತ್ಕಾಲಿಕ ಪಟ್ಟಿ ಪ್ರಕಟಿಸಿ ಆಕ್ಷೇಪಣೆಗಳನ್ನು ಆಹ್ವಾನಿಸುವ ದಿನಾಂಕ | 03.08.2015 |
| 05 | ಜಿಲ್ಲಾ ಹಂತದಲ್ಲಿ ಆಕ್ಷೇಪಣೆಗಳನ್ನು ಪರಿಶೀಲಿಸಿ, ಹೆಚ್ಚುವರಿ ಶಿಕ್ಷಕರ ಅಂತಿಮ ಪಟ್ಟಿ ಪ್ರಕಟಿಸುವ ದಿನಾಂಕ | 10.08.2015 |
| 06 | ಉಪನಿರ್ದೇಶಕರ ಹಂತದಲ್ಲಿ ಕೌನ್ಸಿಲಿಂಗ್ ನಡೆಸಿ, ಸ್ಥಳಾಂತರಗೊಂಡ ಶಿಕ್ಷಕರಿಗೆ ಆದೇಶ ನೀಡುವ ದಿನಾಂಕ | 14.08.2015 |
| 07 | ಈ ಪ್ರಕ್ರಿಯೆ ಮುಗಿದ ನಂತರ ಜಿಲ್ಲಾ ಹಂತದಲ್ಲಿ ಖಾಲಿ ಹುದ್ದೆಗಳಿಲ್ಲದೆ ಮರು ಹಂಚಿಕೆಯಾಗದೆ ಬಾಕಿ ಇರುವ ಹೆಚ್ಚುವರಿ ಶಿಕ್ಷಕರ ಪಟ್ಟಿ ಹಾಗೂ ಖಾಲಿ ಹುದ್ದೆ ಮಾಹಿತಿಯನ್ನು ನಿರ್ದೇಶಕರು [ಪ್ರೌಢ ಶಿಕ್ಷಣ], ಇವರಿಗೆ ಕಳುಹಿಸುವ ದಿನಾಂಕ | 19.08.2015 |
| 08 | ಈ ಪಟ್ಟಿಯನ್ನು ಪರಿಶೀಲಿಸಿ, ಹೆಚ್ಚುವರಿ ಶಿಕ್ಷಕರ ತಾತ್ಕಾಲಿಕ ಪಟ್ಟಿಗೆ ಆಕ್ಷೇಪಣೆಗಳನ್ನು ಆಹ್ವಾನಿಸುವ ದಿನಾಂಕ | 25.08.2015 |
| 09 | ನಿರ್ದೇಶಕರು [ಪ್ರೌಢ ಶಿಕ್ಷಣ] ಇವರ ಹಂತದಲ್ಲಿ ಆಕ್ಷೇಪಣೆಗಳನ್ನು ಪರಿಶೀಲಿಸಿ, ಅಂತಿಮ ಹೆಚ್ಚುವರಿ ಪಟ್ಟಿ ಪ್ರಕಟಿಸುವ ದಿನಾಂಕ | 27.08.2015 |
| 10 | ನಿರ್ದೇಶಕರು [ಪ್ರೌಢ ಶಿಕ್ಷಣ] ಇವರ ಹಂತದಲ್ಲಿ ಕೌನ್ಸಿಲಿಂಗ್ ನಡೆಸಿ, ಸ್ಥಳಾಂತರಗೊಂಡ ಶಿಕ್ಷಕರುಗಳಿಗೆ ಆದೇಶ ನೀಡುವ ದಿನಾಂಕ | 31.08.2015 |

ಮೇಲ್ಕಂಡ ಎಲ್ಲಾ ಪ್ರಕ್ರಿಯೆಗಳನ್ನು ಸರ್ಕಾರದ ಆದೇಶ ಸಂಖ್ಯೆ:ಇಡಿ:137:ಎಸ್ಇಪಿ:2000, ದಿನಾಂಕ:23.01.2002 ಹಾಗೂ ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ:200:ಪಿಎಂಸಿ:1999, ದಿನಾಂಕ:03.02.2000ರ ರೀತ್ಯಾ ಕ್ರಮವಹಿಸಲು ಆದೇಶಿಸಿದೆ.

13/7/15

**ಆಯುಕ್ತರು.**

**ಸಾರ್ವಜನಿಕ ಶಿಕ್ಷಣ ಇಲಾಖೆ.**

01. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಮತ್ತು ಗುಲ್ಬರ್ಗಾ, ಇವರಿಗೆ ಕಳುಹಿಸುತ್ತಾ, ತಮ್ಮ ಆಯುಕ್ತಾಲಯ ವ್ಯಾಪ್ತಿಯಲ್ಲಿರುವ ಹೆಚ್ಚುವರಿ ಶಿಕ್ಷಕರುಗಳನ್ನು ಗುರುತಿಸುವ ಬಗ್ಗೆ ಮೇಲ್ಕಂಡಂತೆ ಕ್ರಮವಹಿಸಲು ತಿಳಿಸಿದೆ.
02. ಬೆಂಗಳೂರು ಮತ್ತು ಮೈಸೂರು ವಿಭಾಗದ ಎಲ್ಲಾ ಜಿಲ್ಲಾ ಉಪನಿರ್ದೇಶಕರುಗಳಿಗೆ ಕಳುಹಿಸುತ್ತಾ, ಸಂಬಂಧಿಸಿದ ಆಡಳಿತ ಮಂಡಳಿಯ ಮುಖ್ಯಸ್ಥರಿಗೆ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ತಮ್ಮ ಹಂತದಲ್ಲಿಯೇ ಮೇಲ್ಕಂಡ ಸುತ್ತೋಲೆಯಲ್ಲಿನ ಅಂಶಗಳನ್ನು ಕಟ್ಟು ನಿಟ್ಟಾಗಿ ಪಾಲಿಸುವ ಬಗ್ಗೆ ಕ್ರಮವಹಿಸಲು ತಿಳಿಸಿದೆ.
03. ಈ ಕಛೇರಿಯ ಇ-ಗೌವರ್ನೆನ್ಸ್ ಶಾಖೆಗೆ ಕಳುಹಿಸುತ್ತಾ ಸದರಿ ಸುತ್ತೋಲೆಯನ್ನು ಇಲಾಖಾ ವೆಬ್-ಸೈಟ್‌ನಲ್ಲಿ ಪ್ರಕಟಿಸಲು ಮತ್ತು ಎಲ್ಲಾ ಜಿಲ್ಲಾ ಉಪ ನಿರ್ದೇಶಕರಿಗೆ ಇ-ಮೇಲ್ ಮೂಲಕ ಕಳುಹಿಸಲು ಅಗತ್ಯ ಕ್ರಮ ಕೈಗೊಳ್ಳುವುದು.
04. ಕಛೇರಿ ಪ್ರತಿ. c:\users\vasanth\desktop\exex teachers.doc